**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 155/2020

ಪಿಡಬ್ಲು : 2 ಸಿಡಬ್ಲು : 12

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ವಿಠ್ಠಲ ಯಲ್ಲಪ್ಪ ದೊಡಮನಿ |
| ತಂದೆಯ ಹೆಸರು | : ಯಲ್ಲಪ್ಪ ದೊಡಮನಿ |
| ವಯಸ್ಸು | : 27 ವರ್ಷ |
| ಉದ್ಯೋಗ | : ಗೌಂಡಿ ಕೆಲಸ |
| ವಾಸ್ತವ್ಯ | : ಬಸರಕೋಡ |
| ದಿನಾಂಕ | : 15.03.2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ನನ್ನ ದೊಡ್ಡಪ್ಪನ ಮಗನಾದ ಬಸವರಾಜ ಇತನ ಹೆಂಡತಿ. ಚಾಸಾಃ 8 ಚಾಸಾಃ 1 ರವರ ಅಣ್ಣ. ಚಾಸಾಃ9 ನನ್ನ ದೊಡ್ಡಪ್ಪ. ಚಾಸಾಃ 10 ನನ್ನ ದೊಡ್ಡಪ್ಪನ ಹೆಂಡತಿ. ಚಾಸಾಃ 11 ನನ್ನ ತಂದೆ. ಚಾಸಾಃ 13 ನನ್ನ ದೊಡ್ಡಪ್ಪನ ಮಗ. ಚಾಸಾಃ 14 ನನ್ನ ದೊಡ್ಡಪ್ಪನ ಮಗ. ಚಾಸಾಃ20 ಮತ್ತು ಚಾಸಾಃ21 ಸಂಬಂಧಿಕರು. ಚಾಸಾಃ 15 ರಿಂದ ಚಾಸಾಃ19 ಪರಿಚಯ. ಸದರಿಯವರು ನಮ್ಮ ಊರಿನವರಾಗಿರುತ್ತಾರೆ. ನನ್ನ ದೊಡ್ಡಪ್ಪನಾದ ರುದ್ರಪ್ಪ ದೊಡಮನಿ ಇತನಿಗೆ ಇಬ್ಬರು ಗಂಡು ಮಕ್ಕಳು ಇದ್ದರು, 1. ಮೃತ ಬಸವರಾಜ ಮತ್ತು 2. ಶ್ರೀಶೈಲ. ನನ್ನ ದೊಡ್ಡಪ್ಪನ ಮಗ ಬಸವರಾಜ ಇತನಿಗೆ ಮದುವೆ ಆಗಿದ್ದು ಆತನ ಹೆಂಡತಿಯ ತವರುಮನೆ ತುರುಕರ ಶೀಗಿಹಳ್ಳಿ, ನನ್ನ ದೊಡ್ಡಪ್ಪನ ಮಗನಾದ ಬಸವರಾಜ ಇತನಿಗೆ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ.

2. ನನ್ನ ದೊಡ್ಡಪ್ಪನ ಮಗ ಬಸವರಾಜ ಇತನು ಮೃತ ಪಡುವ ಮುಂಚೆ ಆತ ಗ್ರಾಮ ಪಂಚಾಯತಿಯ ಸದಸ್ಯನಿದ್ದನು. ಈ ಪ್ರಕರಣದ ಆರೋಪಿತರು ಪರಿಚಯ. 2 ನೇ

ಆರೋಪಿಯ ಹೆಂಡತಿ ಮತ್ತು ಬಸವರಾಜನ ಸಂಬಂಧ ಏನಿತ್ತು ಮತ್ತು ಏನು ತಂಟೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. 3 ನೇ ಆರೋಪಿಯೊಂದಿಗೆ ಮೃತ ಬಸವರಾಜನ ಸಂಬಂಧ ಏನಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪನ ಮಗ ಬಸವರಾಜ ಇತನನ್ನು ಕೊಲೆ ಮಾಡಲಾಗಿರುತ್ತದೆ.

3. ಈಗ 5 ವರ್ಷಗಳ ಹಿಂದೆ ನಮ್ಮ ಓಣಿಯಲ್ಲಿ ಕರೆಮ್ಮ ದೇವಸ್ಥಾನವನ್ನು ಕಟ್ಟಲು ಪ್ರಾರಂಭ ಮಾಡಿದ್ದು ಅದಕ್ಕೆ ನನ್ನ ದೊಡ್ಡಪ್ಪ ನೀರು ಬಿಡುತ್ತಿದ್ದನು, ಒಂದು ದಿನ ನನ್ನ ದೊಡ್ಡಪ್ಪ ದೇವಸ್ಥಾನಕ್ಕೆ ನೀರು ಬಿಡಲು ಹೋದಾಗ ನನ್ನ ಅಣ್ಣ ಬಸವರಾಜ ಇತನನ್ನು ಗೋಪಾಲ ಪಾಗದ ಇತನ ಮನೆಯ ಹಿತ್ತಲಿನಲ್ಲಿ ಬಡೆದು ಹಾಕಿದ ವಿಷಯ ಪೋಲಿಸರು ತಿಳಿಸಿದ್ದಾಗಿ ನಮ್ಮ ಮನೆಗೆ ಬಂದು ನನಗೆ, ನನ್ನ ತಂದೆಗೆ ಹಾಗೂ ನನ್ನ ದೊಡ್ಡವ್ವನಿಗೆ ತಿಳಿಸಿದ್ದು ಆಗ ನಾನು, ನನ್ನ ತಂದೆ, ನನ್ನ ದೊಡ್ಡಪ್ಪ ಮತ್ತು ನನ್ನ ದೊಡ್ಡಮ್ಮ ಸೇರಿ ಗೋಪಾಲ ಪಾಗದ ಇವರ ಮನೆಯ ಹಿತ್ತಲಕ್ಕೆ ಹೋಗಿ ನೋಡಿದ್ದು ಅಲ್ಲಿ ನನ್ನ ದೊಡ್ಡಪ್ಪನ ಮಗ ಬಸವರಾಜ ಬಿದ್ದಿದ್ದು ಆತನ ತಲೆಗೆ, ಮುಖಕ್ಕೆ ಕೈಕಾಲುಗಳು ಮುರಿದು ರಕ್ತ ಬಂದು ಸೋರಾಡಿ ಒಣಗಿತ್ತು.

4. ಆತನನ್ನು ನೋಡಲಾಗಿ ಆತನಿಗೆ ಪ್ರಜ್ಞೆ ಇರಲಿಲ್ಲ. ಆ ಸಮಯದಲ್ಲಿ ಅಂಬ್ಯುಲೆನ್ಸ ವಾಹನ ಬಂದಿದ್ದು ನನ್ನ ದೊಡ್ಡಪ್ಪನ ಮಗನಾದ ಬಸವರಾಜ ಇತನನ್ನು ಉಪಚಾರಕ್ಕೆಂದು ನಾನು, ರುದ್ರಪ್ಪ ಹಾಗೂ ನನ್ನ ದೊಡ್ಡಪ್ಪನ ಮಗ ಶ್ರೀಶೈಲ ಮತ್ತು ನನ್ನ ತಂದೆ ಕೂಡಿ ಸದರಿ ಅಂಬ್ಯುಲೆನ್ಸನಲ್ಲಿ ಕಿತ್ತೂರು ಸರ್ಕಾರಿ ದವಾಖಾನೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದ್ದು, ಡಾಕ್ಟರ ಆತನನ್ನು ನೋಡಿ ಹೆಚ್ಚಿನ ಚಿಕಿತ್ಸೆಗಾಗಿ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದ್ದರಿಂದ ನನ್ನ ದೊಡ್ಡಪ್ಪ ರುದ್ರಪ್ಪ ಇತನಿಗೆ ಕಿತ್ತೂರಿನಲ್ಲಿ ಇರಲು ಹೇಳಿ ಬಸವರಾಜ ಇತನ ಹೆಂಡತಿಗೆ ಘಟನೆ ವಿಷಯವನ್ನು ಪೋನ ಮುಖಾಂತರ ಯಾರೋ ತಿಳಿಸಿದ್ದು ನಾವು ಬಸವರಾಜ ಇತನನ್ನು ಕಿತ್ತೂರದಿಂದ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದೇವು.

5. ಧಾರವಾಡ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯರು ಬಸವರಾಜ ಇತನನ್ನು ನೋಡಿ ಅವನು ತೀರಿಕೊಂಡಿದ್ದಾನೆ ಅಂತಾ ಹೇಳಿದರು. ಬಸವರಾಜ ತೀರಿಕೊಂಡ ವಿಷಯ ಬಸವರಾಜನ ಹೆಂಡತಿ ಸಾವಿತ್ರಿ ಇವಳಿಗೆ ಹಾಗೂ ನಮ್ಮ ಸಂಬಂಧಿಕರಿಗೆ ತಿಳಿಸಿದ್ದು ಆಗ ಸದರಿಯವರು ಬಸವರಾಜ ಇತನ ಶವ ನೋಡಲು ಧಾರವಾಡ ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಬಂದಿರುತ್ತಾರೆ.

6. ಬಸವರಾಜ ಇತನ ಸಾವಿನ ಬಗ್ಗೆ ಯಾರು ದೂರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಾಗಲಿಲ್ಲ ಕಾರಣ ನಾನು ಆ ದಿನ ಧಾರವಾಡ ಜಿಲ್ಲಾ ಆಸ್ಪತ್ರೆಯಲ್ಲಿ ಇದ್ದೇನು. ಆ ದಿನ ನನ್ನ ದೊಡ್ಡಪ್ಪನ ಮಗನ ಸಾವಿಗೆ ಯಾರು ಕಾರಣ ಎಂದು ಗೊತ್ತಿರಲಿಲ್ಲ ಆದರೆ ತದನಂತರ ಗೊತ್ತಾದ ವಿಷಯ ಏನೇಂದರೆ ನನ್ನ ದೊಡ್ಡಪ್ಪನ ಮಗ ಬಸವರಾಜ ಇತನನ್ನು ಗೋಪಾಲ ಪಾಗದ ಮತ್ತು ಮಹಾಂತೇಶ ಬಡೆದಿರುತ್ತಾರೆ ಎಂದು ಗೊತ್ತಾಯಿತು. ನನ್ನ ದೊಡ್ಡಪ್ಪನ ಮಗ ಬಸವರಾಜ ಇತನ ಸಾವಿಗೆ ಏನು ಕಾರಣ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**).

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನನ್ನ ದೊಡ್ಡಪ್ಪನ ಮಗ ಬಸವರಾಜ ಇತನು ತೀರಿಕೊಳ್ಳುವ ಮೂರು ವರ್ಷಗಳ ಹಿಂದೆ ನಮ್ಮ ಊರ ಮಾಹಂತೇಶ ಕಲ್ಲಪ್ಪ ಪಾಗದ ಇವನ ಹೆಂಡತಿ ನಾಗವ್ವ ಪಾಗದ ಇವಳೊಂದಿಗೆ ಅಸಭ್ಯವಾಗಿ ನಡೆದುಕೊಂಡಿದ್ದರಿಂದ ಮಹಾಂತೇಶ ಪಾಗದ ಹಾಗೂ ಅವರ ಮನೆಯವರು ಬಸವರಾಜ ಇವನೊಂದಿಗೆ ತಂಟೆ ಮಾಡಿ ಅವನ ಮೇಲೆ ಸಿಟ್ಟಾಗಿದ್ದರು ಎನ್ನುವ ವಿಷಯ ನನಗೆ ಗೊತ್ತಾಯಿತು ಎಂದರೆ ಸರಿ. ಬಸವರಾಜ ಮೃತಪಡುವ ಸ್ವಲ್ಪ ದಿನಗಳ ಮುಂಚೆ ಬಸವರಾಜ ಇತನು ಗೋಪಾಲ ಪಾಗದ ಇವನ ಹೆಂಡತಿಯಾದ 3 ನೇ ಆರೋಪಿ ಇವಳೊಂದಿಗೆ ಸಲಿಗೆಯಿಂದ ಇರುತ್ತಿದ್ದರಿಂದ ಆಗ ಅವಳೊಂದಿಗೆ ಮೊಬೈಲದಲ್ಲಿ ಹೆಚ್ಚಾಗಿ ಮಾತನಾಡುತ್ತಿದ್ದರಿಂದ

ಗೋಪಾಲ ಪಾಗದ ಮತ್ತು ಆತನ ತಮ್ಮ ಮಹಾಂತೇಶ ಪಾಗದ ಇವರು ಬಸವರಾಜ ಇತನ ಮೇಲೆ ಸಿಟ್ಟಾಗಿ ತಂಟೆ ಮಾಡುತ್ತಿದ್ದರು ಎಂದರೆ ಸರಿ.

2. ಬಸವರಾಜ ಇತನು ಸಾಯುವ 2-3 ದಿನಗಳ ಮುಂಚೆ ತನ್ನ ಹೆಂಡತಿಯನ್ನು ಆಕೆಯ ತವರುಮನೆಗೆ ಆಕೆಯ ತಾಯಿಯ ಕಣ್ಣಿನ ಆಪರೇಶನ ಆಗಿದ್ದರಿಂದ ಅವಳಿಗೆ ನೊಡಲಿಕ್ಕೆ ಹೋಗಿದ್ದನು ಎಂದರೆ ಸರಿ. ದಿಃ 02.03.2020 ರಂದು ಬಸವರಾಜ ಇತನು ತನ್ನ ಹೆಂಡತಿಯ ತವರುಮನೆಯಿಂದ ಬಂದು ರಾತ್ರಿ ಊಟ ಮಾಡಿ ಮನೆಯಿಂದ ಹೋಗಿದ್ದನು ಆತ ಮತ್ತೆ ಮರಳಿ ಮನೆಗೆ ಬಂದಿರಲಿಲ್ಲ ಎಂದರೆ ಸರಿ. ನಂತರ ನಮಗೆ ತಿಳಿದುಬಂದಿದ್ದೇನೆಂದರೆ ನನ್ನ ದೊಡ್ಡಪ್ಪನ ಮಗ ಬಸವರಾಜ ಇತನು ಮಹಾಂತೇಶ ಹಾಗೂ ಗೋಪಾಲ ಪಾಗದ ಇವರ ಹೆಂಡತಿಯರೊಂದಿಗೆ ಅಸಭ್ಯವಾಗಿ ವರ್ತಿಸಿ ಅವರೊಂದಿಗೆ ತಂಟೆ ಮಾಡಿ ವೈಮನಸ್ಸು ಬೆಳೆಸಿಕೊಂಡಿದ್ದರಿಂದ ಈ ಪ್ರಕರಣದ 3 ಜನ ಆರೋಪಿತರು ಕೂಡಿ ಸಂಚು ಮಾಡಿ ಬಸವರಾಜ ಇತನಿಗೆ ತಮ್ಮ ಮನೆಯ ಕಡೆಗೆ ದಿಃ03.03.2020 ರಂದು ಬೆಳಗಿನ ಜಾವ 1.30 ಗಂಟೆಗೆ ಮನೆಯ ಹತ್ತಿರ ಕರೆಸಿಕೊಂಡು ಬಸವರಾಜ ಇವನಿಗೆ ಕಣ್ಣಿಗೆ ಕಾರದ ಪುಡಿ ಗೊಜ್ಜಿ ಈ ಪ್ರಕರಣದ 1 ಮತ್ತು 2ನೇ ಆರೋಪಿತರು ಸೇರಿ ಬಸವರಾಜ ಇತನಿಗೆ ಬಡಿಗೆಗಳಿಂದ ತಲೆ, ಮುಖ, ಕೈಕಾಲುಗಳಿಗೆ ಹೊಡೆದು ಬಹಳ ಗಾಯಪಡಿಸಿ ಕೊಲೆ ಮಾಡಿರುತ್ತಾರೆ ಎಂದು ಗೊತ್ತಾಯಿತು ಎಂದರೆ ಸರಿ.

3. ಸದರಿ ಘಟನೆ ವಿಷಯವಾಗಿ ಮೃತ ಬಸವರಾಜನ ಹೆಂಡತಿ ಮೂರು ಜನ ಆರೋಪಿತರ ವಿರುದ್ಧ ದೂರು ಕೊಟ್ಟಿರುತ್ತಾರೆ ಎನ್ನುವ ವಿಷಯ ಗೊತ್ತಾಯಿತು ಎಂದರೆ ಸರಿ. ಕಿತ್ತೂರು ಪೋಲಿಸರು ವಿಚಾರಣೆ ಮಾಡಿದಾಗ ಈ ಮೇಲೆ ಹೇಳಿದ ವಿಷಯವನ್ನು ಹೇಳಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ.ಹೆಚ್.ಸಿ.ಎಸ್. ವಕೀಲರವರಿಂದ ಆರೋಪಿತರ ಪರವಾಗಿ</u>**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.